ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 12/07/17 ರಂದು ಪಾಲಿಕೆಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ 2016–17 ಮತ್ತು 2017–18ನೇ ಸಾಲಿನಲ್ಲಿ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ದಿ ಯೋಜನೆಯಡಿ ರೂ. 7300.00 ಕೋಟಿಗಳ ಅನುದಾನವನ್ನು ಘೋಷಿಸಿರುವ ಯೋಜನೆಗಳ ಪೈಕಿ ರೂ. 1010.00 ಲಕ್ಷಗಳ ಪ್ಯಾಕೇಜ್ ಟೆಂಡರ್ ಆಹ್ವಾನಿಸಿರುವ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ನೀಡುವ ಬಗ್ಗೆ ರಚಿಸಲಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿಗಳು:

1. **ಮಾನ್ಯ ಆಯುಕ್ತರು (ಬಿಬಿಎಂಪಿ)**
2. **ಮಾನ್ಯ ವಿಶೇಷ ಆಯುಕ್ತರು (ಯೋಜನೆ)**
3. **ಪ್ರಧಾನ ಅಭಿಯಂತರರು**
4. **ಮುಖ್ಯ ಅಭಿಯಂತರರು (ಯಲಹಂಕ)**
5. **ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)**

ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರವು 2016–17 ಮತ್ತು 2017–18ನೇ ಸಾಲಿನಲ್ಲಿ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ದಿ ಯೋಜನೆಯಡಿ ರೂ. 7300.00 ಕೋಟಿಗಳ ಅನುದಾನವನ್ನು ಘೋಷಿಸಿದ್ದು, ಸದರಿ ಕ್ರಿಯಾ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಇ:199:ಎಸ್ಎಫ್.ಸಿ 2016 (ಭಾಗ–1) ಬೆಂಗಳೂರು, ದಿನಾಂಕ:21.06.2016 ರ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.. ಸದರಿ ಯೋಜನೆಗಳ ಟೆಂಡರ್ ಮೌಲ್ಯಮಾಪನಕ್ಕಾಗಿ ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ ಮು.ಅ/ಮ.ವ/ಪಿ.ಆರ್/26/15–16 ದಿನಾಂಕ : 05–06–2015ರ ಆದೇಶದಂತೆ ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಮೇರೆಗೆ ಮುಖ್ಯ ಅಭಿಯಂತರರು ಯಲಹಂಕ ವಲಯ ರವರು 2016–17ನೇ ಸಾಲಿನ ನಗರೋತ್ಥಾನ ಯೋಜನೆಯಡಿ ಘೋಷಿಸಿರುವ ಯೋಜನೆಗಳ ಪೈಕಿ ಟೆಂಡರ್ ಆಹ್ವಾನಿಸಿರುವ ಯೋಜನೆಗಳಿಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ನೀಡಿರುವ ತಾಂತ್ರಿಕ ವರದಿಯನ್ನು ಕ್ರೋಢೀಕರಿಸಿ ಮೌಲ್ಯಮಾಪನಕ್ಕೆ ವಿಷಯ–1ರಂತೆ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಿರುತ್ತಾರೆ.

ಈ ವಿಷಯವಾಗಿ ದಿನಾಂಕ: 12/07/17 ರಂದು ಟೆಂಡರ್ ಮೌಲ್ಯಮಾಪನ ಸಮಿತಿಯು ವಿಷಯ ಮೌಲ್ಯಮಾಪನಕ್ಕೆ ವಿಷಯ–1ರ ಪಟ್ಟಿಯ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯು ತೀರ್ಮಾನಿಸಲಾಯಿತು.

ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weight age ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ : No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ, ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause -15.2 ಮತ್ತು 3.2 ಬಿ ಪರಿಗಣಿಸಲಾಗಿದೆ.

ವಿಷಯ ಸಂಖ್ಯೆ : –1

ಕ್ರ ಸಂ	ಕಾಮಗಾರಿಯ /ಪ್ಯಾಕೇಜ್ ಕಾಮಗಾರಿಗಳ ಹೆಸರು (G.O:UDD 199 SFC 2016 (PS) DT:21.6.2016 ANNEXER	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು	ಷರಾ
	Improvements to roads, drains, footpaths and park in ward no. 08 No of works -11 Indent No. 25347	1010.00	1. ಎ.ಚನ್ನಾರೆಡ್ಡಿ (ACR Project)	ಅನರ್ಹರಾಗಿರುತ್ತಾರೆ
			2. ಶ್ರೀ.ಸಿ.ಜಿ.ಚಂದ್ರಪ್ಪ	ಅನರ್ಹರಾಗಿರುತ್ತಾರೆ
1	Improvements to road, drain and footpath in Lottegollahalli main road and cross roads in Ward No. 8 Kodigehalli		3. ಸಿ.ಸೊಣ್ಣೆಗೌಡ (Prashanth road infraprojects and developers private ltd.	ಅನರ್ಹರಾಗಿರುತ್ತಾರೆ
2	Improvements to road, drain and footpath in main road and abutting cross roads of Maruthinagara 2nd stage in Ward No. 8 Kodigehalli.			
3	Improvements to road, drain and footpath in Kannuramma main road and abutting cross roads in Ward No. 8 Kodigehalli		4. ನಾಗೇಶ್ ಮಾಯಣ್ಣ (Saithisha infraengineers private ltd.,)	ಅನರ್ಹರಾಗಿರುತ್ತಾರೆ
4	Improvements to Roads and Drains from National Highway (Airport Road) near Military farm upto Amco Layout in Kodigehalli in Ward No. 8		5. ಪ್ರಮೋದ್ (Karthik Enterprises)	ಅರ್ಹರಾಗಿರುತ್ತಾರೆ
5	Improvements to road, drain and footpath along railway parallel road and cross road in Ward No. 8 Kodigehalli			
6	Improvements to road, drain and footpath in main road and abutting cross roads of Maruthinagara 1st stage in Ward No. 8 Kodigehalli			
7	Improvements to road, drain and footpath in 5th cross road abutting cross road of Tatanagar in Ward No. 8 Kodigehalli			
8	Improvements to road, drain and footpath in Devinagara main road and cross roads in Ward No. 8 Kodigehalli			
9	Development and improvements to parks in CQAL layout and sahakaranagara in Ward No. 8 Kodigehalli			

10	Improvements to road, drain and footpath in main and cross roads of Kodigehalli in Ward No. 8 Kodigehalli			
11	Improvements to road, drain and footpath in LKR nagara main road and cross roads in Ward No. 8 Kodigehalli			

ಸದರಿ ಯೋಜನೆಯ ತಾಂತ್ರಿಕ ಬಿಡ್‌ನ್ನು ದಿನಾಂಕ 22–04–2017 ರಂದು ತೆರೆಯಲಾಗಿರುತ್ತದೆ. ಸದರಿ ಯೋಜನೆಯ ಟೆಂಡರ್ ನಲ್ಲಿ ಐದು ಜನ ಗುತ್ತಿಗೆದಾರರು 1) ಎ.ಚನ್ನಾರೆಡ್ಡಿ (ACR Project) ರವರು, 2) ಸಿ.ಜಿ.ಚಂದ್ರಪ್ಪ ರವರು, 3) ಸಿ. ಸೊಣ್ಣೇಗೌಡ (M/s Prashanth road infra projects and Developer Pvt Ltd formally prashanth Developers) ರವರು, 4) ನಾಗೇಶ್ ಮಾಯಣ್ಣ, (SAITRISHA INFRAENGINEERS PRIVATE LIMITED), ಮತ್ತು 5) ಶ್ರೀ. ಪ್ರಮೋದ್ (Karthik Enterprises) ಭಾಗವಹಿಸಿದ್ದು, ಅದರಲ್ಲಿ 1) ಎ.ಚನ್ನಾರೆಡ್ಡಿ (ACR Project) ರವರು, 2) ಸಿ.ಜಿ.ಚಂದ್ರಪ್ಪ ರವರು, 3) ಸಿ. ಸೊಣ್ಣೇಗೌಡ (M/s Prashanth road infra projects and Developer Pvt Ltd formally prashanth Developers) ರವರು, ಮತ್ತು 4) ನಾಗೇಶ್ ಮಾಯಣ್ಣ, (SAITRISHA INFRAENGINEERS PRIVATE LIMITED), ರವರುಗಳು ಕೆ.ಡಬ್ಲೂ–4ರ ಷರತ್ತುಗಳಂತೆ ತಾಂತ್ರಿಕವಾಗಿ ಅನರ್ಹರಾಗಿರುತ್ತಾರೆ ಹಾಗೂ ಶ್ರೀ. ಪ್ರಮೋದ್ (Karthik Enterprises) ಕೆ.ಡಬ್ಲೂ–4 ರಲ್ಲಿರುವ ಷರತ್ತುಗಳಂತೆ ಅರ್ಹರಾಗಿರುವುದರಿಂದ ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಕ್ರಮಕೈಗೊಳ್ಳಲು ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿಯ ಮುಂದೆ ಟಿಪ್ಪಣಿ ಪರಿಶೀಲಿಸಲಾಯಿತು.

ತೀರ್ಮಾನ :

ಸಲ್ಲಿಕೆಯಾದ ದಾಖಲೆಗಳನ್ನು ಪರಿಶೀಲಿಸಿ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು ಸಿದ್ದಪಡಿಸಿದ್ದು, ತಾಂತ್ರಿಕ ತುಲನಾತ್ಮಕ ಪಟ್ಟಿಯನ್ನು ಅವಲೋಕಿಸಲಾಯಿತು. ಸದರಿ ತುಲನಾತ್ಮಕ ಪಟ್ಟಿಯಂತೆ ಗುತ್ತಿಗೆದಾರರಾದ ಶ್ರೀ.ಪ್ರಮೋದ್ (Karthik Enterprises) ರವರು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್ಡನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ

ಮುಖ್ಯ ಅಭಿಯಂತರರು
ಯಲಹಂಕ ವಲಯ

ಪ್ರಧಾನ ಅಭಿಯಂತರರು
ಬಿಬಿಎಂಪಿ

ವಿಶೇಷ ಆಯುಕ್ತರು (ಯೋಜನೆ)
ಬಿ.ಬಿ.ಎಂ.ಪಿ

ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ
ಮೌಲ್ಯಮಾಪನ/ಆರ್ಥಿಕ ಮೌಲ್ಯ ಮಾಪನ
ಮತ್ತು ದರಸಂಧಾನ ಸಮಿತಿ